# ಜೀವನ್ಮುಖಿ ಅಮೃತಬಳ್ಳಿ



**ಮಕ್ಕಳು ಮತ್ತು ಅಮೃತಬಳ್ಳಿಯ ನಡುವಣ ಸಾಮಾನ್ಯಗುಣ 'ಜೀವನೋತ್ಸಾಹ'. ಎಂಥ ಸಂದರ್ಭದಲ್ಲೂ ಬೆಳೆಯಬಲ್ಲೆ ಎನ್ನುವ ಮಕ್ಕಳ ಮನೋಭಾವ ಅಮೃತಬಳ್ಳಿಯಲ್ಲೂ ಇದೆ.**

■ ಸ್ವಯಂಪ್ರಭಾ

ಕಳೆದ ವರ್ಷ ಕೊರೊನಾ ಸಂದರ್ಭದಲ್ಲಿ ಅಮೃತಬಳ್ಳಿಗೆ ಡಿಮ್ಯಾಂಡಪ್ಪೋ ಡಿಮ್ಯಾಂಡು. ಯಾರದೋ ಮನೆಯ ಅಂಗಳದ ಚಟ್ಟಿಯಲ್ಲಿ ನೆಟ್ಟಿದ್ದ ಅಮೃತಬಳ್ಳಿಯನ್ನು ಕಿತ್ತು ಕಷಾಯ ಮಾಡಿ, ಕೊರೊನಾ ಓಡಿಸಿದ ಹುಸಿ ನೆಮ್ಮದಿ ಪ್ರಾಪ್ತಿ ಮಾಡಿಕೊಂಡವರ ಸಂಖ್ಯೆ ದೊಡ್ಡದು. ಮತ್ತೆ ಕೆಲವರು ತಮ್ಮದೇ ಹೊಲ ಗದ್ದೆಗಳ ಮೂಲೆಗಳಲ್ಲಿ ನಿರ್ಲಕ್ಷ್ಯದಿಂದ ಬೆಳೆದಿದ್ದ ಬಳ್ಳಿಯನ್ನು, ಜೋಪಾನವಾಗಿ ಕತ್ತರಿಸಿ ತಂದಿಟ್ಟುಕೊಂಡರು.

ತುರ್ತು ಸಂದರ್ಭಕ್ಕೆ ಇರಲಿ ಎಂದು ಹಾಗೆ ತಂದಿಟ್ಟುಕೊಂಡ ಬಳ್ಳಿಯೊಂದು ಕಪಾಟಿನಲ್ಲಿತ್ತು. ಈ ವರ್ಷ ನೋಡಿದರೆ, ಆ ಬಳ್ಳಿಯಿಂದ ದಾರದಂತಹ ಸಣ್ಣಬಳ್ಳಿಯೊಂದು ಬಹಳ ಉದ್ದವಾಗಿ ಬೆಳೆದುಬಿಟ್ಟಿದೆ. ಸಿಂಬೆಸುತ್ತಿದ ನೂಲಿನಂತೆ ಬೆಳೆದ ಆ ಕಿರುಬಳ್ಳಿಯು ಕಪಾಟಿನಿಂದ ಹೊರಚಾಚಿ ಉದ್ದಕ್ಕೆ ಬೆಳೆದಿದೆ. ವರ್ಷಗಟ್ಟಲೆಯಾದರೂ ಚಿಗುರುವ ಹುಮ್ಮಸ್ಸು ಉಳಿಸಿಕೊಂಡ ಅಮೃತಬಳ್ಳಿಗೆ ಸರಿಯಾಗಿಯೇ ನಾಮಕರಣವಾದಂತಿದೆ.

ನೀರಿಲ್ಲ ಮಣ್ಣಿಲ್ಲ, ಏನು ಹುಡುಕುತ್ತ ಮುಂದುವರೆಯುತ್ತಿದೆ ಈ ಬಳ್ಳಿ? ಸಪೂರ ದಾರದಂತೆ ಬೆಳೆಯುತ್ತಲೇ ಇದೆಯಲ್ಲ ಎಂಬ ಅಚ್ಚರಿ. ಅಮೃತಬಳ್ಳಿಯಿಂದ ಹೀಗೆ ಹೊರಡುವ ಸಪೂರದಾರವನ್ನೇ ಬಳಸಿ ಪ್ರಾಚೀನ ಕಾಲದಲ್ಲಿ ಗಾಯಗಳಿಗೆ ಹೊಲಿಗೆ ಹಾಕುತ್ತಿದ್ದರಂತೆ ಎಂದು ಎಲ್ಲೋ ಓದಿದ ನೆನಪು. ಜೀವನ್ಮುಖಿ ಎಂಬ ಪದವೇನಾದರೂ ಇದ್ದರೆ ಅದು ಅಮೃತಬಳ್ಳಿಗೆ ಸಲ್ಲಬೇಕು.

ಪುಟಾಣಿ ಮಕ್ಕಳ ಮುಖನೋಡುವಾಗ, ಇವರೇ ನಿಜವಾದ ಜೀವನ್ಮುಖಿಗಳು ಎಂದು ಮತ್ತೊಮ್ಮೆ ಅನಿಸುತ್ತದೆ. ಅಮೃತಬಳ್ಳಿಯ ಆ ಸಪೂರ ಚಿಗುರಿನಂತೆ ಇವರು ಜೀವನವನ್ನು, ಖುಷಿಯನ್ನು ಸದಾ ಅರಸುತ್ತ ಸಾಗುವವರು. ಅನಾಯಾಸವಾಗಿ ಸಿಕ್ಕ ಕೊರೊನಾ ದಿನಗಳ ರಜೆಯಲ್ಲಿ ಹುಸಿ ಚಿಂತೆಯ ಭಾರವಿಲ್ಲದೆ ಚೆಂಗನೆ ಜಿಗಿಯುತ್ತ ಆಟವಾಡುತ್ತಿದ್ದಾರೆ.

ಅಪ್ಪ ಅಮ್ಮಂದಿರು ಮಾತ್ರ ಭಾರೀ ಚಿಂತೆಯಲ್ಲಿದ್ದಾರೆ. ಎಲ್‌ಕೆಜಿ ತರಗತಿಗಳು ಆನ್‌ಲೈನ್‌ನಲ್ಲಿಯೇ ನಡೆಯಲಿ, ಮಕ್ಕಳ ಕ್ಷೇಮವೇ ಮುಖ್ಯ ಎನ್ನುವುದು ಹಿರಿಯರ ವರಸೆ. ಜೊತೆಗೆ ಆನ್‌ಲೈನ್ ತರಗತಿಯಾದರೆ ಇಷ್ಟೊಂದು ಫೀಸು ಯಾಕೆ ಎಂಬುದು ಮತ್ತೆ ತಗಾದೆ. 'ಅರೆ, ನಾವು ಶಾಲೆಯನ್ನು ನಿರ್ವಹಿಸಬೇಡವೇ, ಶಿಕ್ಷಕರಿಗೆ ಫೀಸು ಕೊಡಬೇಡವೇ' ಎಂಬುದು ಆಡಳಿತ ಮಂಡಳಿಯ ಸಮಜಾಯಿಷಿ. ಮಕ್ಕಳಿಗೆ ಇವುಗಳ ಪರಿವೆಯೇನೂ ಇಲ್ಲ. ಪೇಟೆಯ ಮಕ್ಕಳು ಆಡುವುದಕ್ಕೊಂದಿಷ್ಟು ಜಾಗ ಬೇಕೆಂದೂ, ಹಳ್ಳಿಯ ಮಕ್ಕಳು, 'ಈ ಅಪ್ಪ ಅಮ್ಮ ನಮ್ಮ ತಲೆಗೆ ಕೆಲಸದ ಹೊರೆ ವಹಿಸದಿದ್ದರೆ ಸಾಕು' ಎಂದೂ ಆಟದ ಬೆನ್ನೇರಿ ಅಮೃತಬಳ್ಳಿಯಂತೆ ಜೀವನ್ಮುಖಿಗಳಾಗಿದ್ದಾರೆ. ಸಿಗುವ ಅವಕಾಶದಲ್ಲಿ ನುಸುಳಿಕೊಂಡು, ಬಯಲಿನಲ್ಲಿ ಆಟವೋ ಮೊಬೈಲ್‌ನಲ್ಲಿ ನೋಟವೋ, ಒಟ್ಟಿನಲ್ಲಿ ಆಟದ ಬೆನ್ನೇರಿದ್ದಾರೆ.

ಒಂದೆರಡು ದಶಕಗಳ ಹಿಂದಷ್ಟೇ ತುಸು ಹಿಂದಕ್ಕೆ ತಿರುಗಿ ನೋಡಿದರೆ, ಆಗೆಲ್ಲ ಪ್ರತೀವರ್ಷ ಫಲಿತಾಂಶ ಪ್ರಕಟವಾಗುತ್ತಿತ್ತು. ಕೆಲವು ಮಕ್ಕಳು ಫೇಲಾಗಿ, ಒಂದೇ ತರಗತಿಯನ್ನು ಎರಡು ವರ್ಷ ಕಲಿಯುತ್ತಿದ್ದರು. ಅದೇನೂ ಅಪರಾಧವಾಗಿರಲಿಲ್ಲ. 'ಚೆನ್ನಾಗಿ ಓದ್ಕೊ' ಎಂಬ ಬೈಗಳು ಜೋರಾಗುತ್ತಿತ್ತೇ ಹೊರತು, ಅದು ಅವರ ಬದುಕನ್ನೇ ನಿರ್ಧರಿಸುವ ವಿಷಯವೆಂಬಂತೆ ಯಾರೂ ಪರಿಗಣಿಸುತ್ತಿರಲಿಲ್ಲ. ಎಲ್‌ಕೆಜಿ ಮತ್ತು ಯುಕೆಜಿ ಪರಿಕಲ್ಪನೆಗಳೂ ತೀರಾ ಇತ್ತೀಚಿನವು. ಗ್ರಾಮೀಣ ಪ್ರದೇಶಗಳಲ್ಲಿ ಮಕ್ಕಳನ್ನು ಒಂದನೇ ತರಗತಿಗೂ ಕಳಿಸುತ್ತಿರಲಿಲ್ಲ. ನೇರ ಎರಡನೇ ತರಗತಿಯಿಂದ ಶಾಲೆ ಆರಂಭಿಸಿದವರು ಇಂದು ಸಮಾಜದ ವಿವಿಧ ಕ್ಷೇತ್ರಗಳನ್ನು ಆರಿಸಿಕೊಂಡು ದುಡಿಯುತ್ತಿದ್ದಾರೆ. ಆದರೆ ತಮ್ಮ ಮಕ್ಕಳು ಮಾತ್ರ ಎಲ್‌ಕೆಜಿ ಸೇರುವುದು ಒಂದು ದಿನವೂ ತಡವಾಗಬಾರದು ಎಂಬ ಧಾವಂತದಲ್ಲಿದ್ದಾರೆ.

ಇದಕ್ಕೆ ಹಲವು ಕಾರಣಗಳಿರಬಹುದು. ಮೊದಲನೆಯದಾಗಿ ಮಕ್ಕಳನ್ನು ನಿಭಾಯಿಸುವ ಕೌಶಲ, ಅವಕಾಶ, ಚಾಕಚಕ್ಯತೆಯ ಕಡೆಗೆ ಅಪ್ಪ ಅಮ್ಮಂದಿರ ಗಮನ ಕಡಿಮೆಯಾಗಿರುವುದು. ಅಜ್ಜ ಅಜ್ಜಿ ಅಥವಾ, ಚಿಕ್ಕಪ್ಪ ಚಿಕ್ಕಮ್ಮ, ದೊಡ್ಡಪ್ಪನ ಸಂಸಾರದ ಜೊತೆ ಜೊತೆಯಾಗಿದ್ದಾಗ, ಮಕ್ಕಳ ಜವಾಬ್ದಾರಿ ಹಂಚಿಕೊಳ್ಳುವುದು ಸುಲಭ. ಆದರೆ ದುಡಿಯುವ ಪೋಷಕರಿರುವ ಪುಟ್ಟ ಕುಟುಂಬದಲ್ಲಿ ಮಕ್ಕಳ ಕಡೆಗೆ ಗಮನ ಕೊಡುವುದಕ್ಕೆ ಸಮಯ ಸಾಲುವುದಿಲ್ಲ.

ನಗರ ಜೀವನದಲ್ಲಿ ಮಕ್ಕಳಿಗೆ ಮುಕ್ತವಾಗಿ ಆಟವಾಡಲು, ಓಡಾಡಲು ಅವಕಾಶಗಳೇ ಇಲ್ಲ. ಹೊಲಗದ್ದೆಗಳ ನಡುವೆ, ಬೆಟ್ಟ ಬೇಣಗಳ ನಡುವೆ ತಣಿಯದಷ್ಟು ವಿಸ್ಮಯವನ್ನು ಹುಡುಕಬಹುದು. ಅವುಗಳು ಮಕ್ಕಳ ಕುತೂಹಲವನ್ನು ತಣಿಸುತ್ತವೆ. ಆದರೆ ಪೇಟೆಯ ನೋಟವೇ ಬಹಳ ಸೀಮಿತವಾದುದು. ಮಕ್ಕಳ ಕುತೂಹಲಕ್ಕೆ ಹೆಚ್ಚೇನೂ ಅವಕಾಶಗಳಿಲ್ಲದೇ ಇರುವುದರಿಂದ, ಅವರು ಸುತ್ತಿ ಸುತ್ತಿ ಅಪ್ಪ ಅಮ್ಮನ ಕಡೆಗೇ ಮುಖಮಾಡುತ್ತಾರೆ. ಕೆಲಸದ ಒತ್ತಡದಲ್ಲಿರುವ ಅಪ್ಪ ಅಮ್ಮಂದಿರಿಗೆ ಈ ಸಂದರ್ಭದಲ್ಲಿ ಮಕ್ಕಳ ಸುಧಾರಿಸಲು ಶಾಲೆ ಅನಿವಾರ್ಯವಾಗಿಬಿಡುತ್ತದೆ.

ಮಕ್ಕಳ ಕಲಿಕೆಗೆ ಶಾಲೆ ಬೇಕು, ನಿಜ. ಆದರೆ, ಬಾಲ್ಯದ ಕಲಿಕೆಗೆ ಶಾಲೆಯೇ ಅನಿವಾರ್ಯವೇನಲ್ಲ.

ಪ್ರತಿಕ್ರಿಯಿಸಿ: feedback@sudha.co.in